KA / BG-GPO / 2515 / WPP-47 / 2009-2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೪೫ | ಬೆಂಗಳೂರು,ಗುರುವಾರ, ಅಕ್ಟೋಬರ್ ೨೧, ೨೦೧೦(ಆಶ್ವಯುಜ ೨೯, ಶಕವರ್ಷ ೧೯೩೨) | ಸಂಚಿಕೆ ೪೧ |
| --- | --- | --- |

## ಭಾಗ – ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

### ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

**ವಿಷಯ** : ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳಲ್ಲಿ ಜಾರಿಗೆ ತರುವ ಸಲುವಾಗಿ 'ಚಾಲೆಂಜ್ ಫಂಡ್' ಸ್ಥಾಪಿಸುವ ಬಗ್ಗೆ

**ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 92, ಇಆಸು 2009, ಬೆಂಗಳೂರು, ದಿನಾಂಕ: 8ನೇ ಜುಲೈ, 2010**

2009–10ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ, ಸರ್ಕಾರವು ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳನ್ನು ಜಾರಿಗೆ ತರುವ ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳಿಗೆ ರೂ. 10.00 ಕೋಟಿಗಳ (ಹತ್ತು ಕೋಟಿ ರೂಪಾಯಿಗಳು ಮಾತ್ರ) ಚಾಲೆಂಜ್ ಫಂಡ್‌ನ್ನು ಸ್ಥಾಪಿಸಲು ಪ್ರಸ್ತಾಪಿಸಿದೆ. ಚಾಲೆಂಜ್ ಫಂಡ್‌ನ ಸ್ವಲ್ಪ ಪ್ರಮಾಣದ ಮೊತ್ತವನ್ನು ಏಕವ್ಯಕ್ತಿ/ಗುಂಪು ಅಥವಾ ಸಂಸ್ಥೆಯಾಗಲೀ, ಆಡಳಿತದ ಉನ್ನತೀಕರಣಕ್ಕೆ ಉಪಯುಕ್ತವಾದ ಪೈಲಟ್ ಪ್ರಾಜೆಕ್ಟ್‌ಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಕ್ಕಾಗಿ ಪ್ರಶಸ್ತಿಗಾಗಿ ಗುರುತಿಸಲು ಒದಗಿಸಲಾಗುವುದು. ಸಚಿವ ಸಂಪುಟವು ಈ ಯೋಜನೆಯನ್ನು ದಿನಾಂಕ 28–01–2010ರಂದು ಅನುಮೋದಿಸಿರುತ್ತದೆ. ಅದರಂತೆ, ಕೆಳಕಂಡ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ.

**ಯೋಜನೆಯ ಉದ್ದೇಶ :–**

ಈ ಚಾಲೆಂಜ್ ಫಂಡ್ ಉದ್ದೇಶವೇನೆಂದರೆ, ಸರ್ಕಾರದ ಅಧಿಕಾರಿ/ಸಿಬ್ಬಂದಿ/ಸರ್ಕಾರದ ಅಧಿಕಾರಿಗಳು/ಸಿಬ್ಬಂದಿಗಳ ಗುಂಪು/ಮತ್ತು ಸರ್ಕಾರದ ಸಂಸ್ಥೆ ಇವರುಗಳಿಂದ ಕೆಳಕಂಡ ಯಾವುದಾದರೂ ಗುರಿಗಳನ್ನು ಸಾಧಿಸಲು ಪ್ರಯೋಗಾತ್ಮಕ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಸೃಜನಾತ್ಮಕ ವಿಚಾರಗಳನ್ನು ಅಥವಾ ತಂತ್ರಜ್ಞಾನದ ಅಂಶಗಳನ್ನು ಬೆಂಬಲಿಸುವುದು.

ಅ) ಪ್ರಸ್ತುತ ಇರುವ ಸೇವೆಯಲ್ಲಿ ಗಣಮಟ್ಟವನ್ನು ಉತ್ತಮಗೊಳಿಸುವುದು

ಆ) ಸೇವೆಯನ್ನು ನೀಡುವಲ್ಲಿ ವೆಚ್ಚವನ್ನು ಕಡಿತಗೊಳಿಸುವುದು;

ಇ) ಜನರ ಅನುಕೂಲಕ್ಕಾಗಿ ಹೊಸ ಸಾರ್ವಜನಿಕ ಸೇವೆಯನ್ನು ಆರಂಭಿಸುವುದು;

ಈ) ಆಡಳಿತ/ನಿರ್ವಹಣೆಯನ್ನು ಉತ್ತಮಗೊಳಿಸುವುದು;

ಉ) ಸಂಪನ್ಮೂಲ ಸಂಗ್ರಹದಲ್ಲಿ ಪ್ರಗತಿ ಅಥವಾ ಹೊಸ ಸಂಪನ್ಮೂಲ ಮೂಲವನ್ನು ಒದಗಿಸುವುದು;

ಊ) ಸೃಜನಾತ್ಮಕವಾದ ಅಂಶ ಅಥವಾ ತಂತ್ರಜ್ಞಾನ ಹೊಂದಿದ ಉತ್ತಮ ಪೈಲಟ್ ಪ್ರಾಜೆಕ್ಟ್‌ಗಳನ್ನು ಆಹ್ವಾನಿಸುವುದು;

**ಯೋಜನೆಯ ಪ್ರಾಮುಖ್ಯತೆ :–**

ಈ ಪ್ರಸ್ತಾವನೆಯು ಸೃಜನಾತ್ಮಕವಾದ ಅಂಶ ಅಥವಾ ತಂತ್ರಜ್ಞಾನವನ್ನು ಒಳಗೊಂಡಿರತಕ್ಕದ್ದು. ಈ ಚಾಲೆಂಜ್ ಫಂಡ್ ಸೃಜನಾತ್ಮಕ ವಿಚಾರಗಳನ್ನು ಹಾಗೂ ತಂತ್ರಜ್ಞಾನವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪ್ರಾಯೋಗಿಕವಾಗಿ ಪ್ರಯೋಗಾತ್ಮಕ ಯೋಜನೆ ನಿರ್ವಹಿಸಲು ತಗಲುವ ವೆಚ್ಚವನ್ನು ಭರಿಸುತ್ತದೆ. ಪ್ರಸ್ತಾವನೆಗಳು ಕಾರ್ಯನಿರ್ವಹಣೆಯಲ್ಲಿ ಸಾಧಿಸಬಹುದಾದ ಅಭಿವೃದ್ಧಿಯ ಅಂಶಗಳನ್ನೊಳಗೊಂಡಂತೆ ಮಾನದಂಡಗಳನ್ನು ಹೊಂದಿರತಕ್ಕದ್ದು; ಮತ್ತು ಅಂತಹ ಮಾನದಂಡಗಳ ಮೇಲ್ವಿಚಾರಣೆಗಾಗಿ ಹೊಂದಿರಬಹುದಾದ ವ್ಯವಸ್ಥೆಯ ಬಗ್ಗೆ ಸ್ಪಷ್ಟವಾಗಿ ತಿಳಿಸುವುದು. ಪ್ರಸ್ತಾವನೆಯನ್ನು ಯಾವುದೇ ಹಂತದಲ್ಲಿ ಆರಂಭಿಸಬಹುದಾಗಿದ್ದು, ಆಧಾರಸಹಿತವಾದ ಹಾಗೂ ಸ್ಪರ್ಧಾತ್ಮಕ ಪ್ರಕ್ರಿಯೆಯ ಮೂಲಕ ಬೃಹತ್ ಪ್ರಮಾಣದಲ್ಲಿ ನಿರ್ವಹಿಸಲು ಪರಿಣಾಮಕಾರಿಯಾಗಿರತಕ್ಕುದಾದ ಉತ್ತಮವಾದ ಪ್ರಸ್ತಾವನೆಯನ್ನು ಮಾತ್ರ ಪರಿಗಣಿಸಲಾಗುವುದು. ಪ್ರಸ್ತಾವನೆಯು ಯೋಜನೆಯನ್ನು ಉನ್ನತೀಕರಿಸಲು ಸಾಧ್ಯವಾಗುವಂತಹ ಆಧಾರರಹಿತವಾದ ಮತ್ತು ಮಾರಾಟದ ಉದ್ದೇಶವಿಲ್ಲದ ತಂತ್ರಜ್ಞಾನವನ್ನು ಸ್ಪಷ್ಟವಾಗಿ ಹೊಂದಿರತಕ್ಕದ್ದು. ಮಾರಾಟದ ಉದ್ದೇಶವಿರುವ ಪ್ರಸ್ತಾವನೆಗಳನ್ನು ಪ್ರೋತ್ಸಾಹಿಸಬಾರದು.

ಪ್ರಸ್ತಾವನೆಯ ರಚನೆ ಕೆಳಕಂಡಂತೆ ಇರತಕ್ಕದ್ದು :-

1. ಪ್ರಸ್ತಾವನೆಯ ರಚನೆ ಸಂಕ್ಷಿಪ್ತವಾಗಿರಬೇಕು;
2. ಕಂಡಿಕೆ (2)ರಲ್ಲಿನ ಉದ್ದೇಶವನ್ನು ಪ್ರಸ್ತಾವನೆಯ ಮಾರ್ಗಸೂಚಿಗಳು ಹೊಂದಿರತಕ್ಕದ್ದು;
3. ಪ್ರಸ್ತಾವನೆಯು ಯಾವ ರೀತಿಯಲ್ಲಿ ಮಾರಾಟದ ಉದ್ದೇಶವಿಲ್ಲದ್ದು?
4. ಯೋಜನೆಗೆ ತಕ್ಕಂತೆ ಕಾರ್ಯನಿರ್ವಹಣೆಯಲ್ಲಿ ಸಾಧಿಸಿದ ಅಭಿವೃದ್ಧಿಯ ಅಂಶಗಳನ್ನು ಅಳೆಯುವ ಮಾನದಂಡಗಳೇನು?
5. ಪ್ರಸ್ತಾವನೆಯ ಉನ್ನತೀಕರಣದ ವಿಧಾನಗಳನ್ನು ತಿಳಿಸುವುದು;
6. ಕೆಟಿಪಿಪಿ ಆಕ್ಟ್ ಅಡಿ ವಿನಾಯಿತಿ ನೀಡುವ ಅಗತ್ಯವಿದೆಯೇ ಅಥವಾ ಇಲ್ಲವೇ? ಹಾಗಿದ್ದಲ್ಲಿ ಕಾರಣಗಳನ್ನು ನಮೂದಿಸುವುದು.
7. ಪ್ರಸ್ತಾವನೆಯನ್ನು ಮೂರನೆಯವರಿಂದ ಮೌಲ್ಯಮಾಪನ ಮಾಡಿಸಲು ಇರುವ ವ್ಯವಸ್ಥೆಗಳು;
8. ಪ್ರಸ್ತಾವನೆಯ ವೆಚ್ಚ;
9. ಅನುಷ್ಠಾನಕ್ಕಾಗಿ ಆಡಳಿತಾತ್ಮಕ ರಚನೆ ( ಪೈಲಟ್ ಪ್ರಾಜೆಕ್ಟ್ ಆಗಿರುವುದರಿಂದ, ಸಿಬ್ಬಂದಿಯ ಸೃಜನೆಯನ್ನು ನಿರೀಕ್ಷಿಸುವಂತಿಲ್ಲ)
10. ಪ್ರಾಜೆಕ್ಟ್‌ಗಳ ಅನುಷ್ಠಾನವು ಸಂಬಂಧಿಸಿದ ಸರ್ಕಾರದ ಇಲಾಖೆಗಳು/ಸರ್ಕಾರದ ಏಜೆನ್ಸಿಗಳ ಮುಖಾಂತರ ಮಾತ್ರ ನಡೆಯತಕ್ಕದ್ದು;

(ಮೇಲ್ಕಂಡ ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ-2ರಲ್ಲಿ ಮಾಹಿತಿಗಾಗಿ ಪುನರುಚ್ಚರಿಸಲಾಗಿದೆ)

ಉನ್ನತಾಧಿಕಾರದ ಸಮಿತಿಯು ಪೈಲಟ್ ಪ್ರಾಜೆಕ್ಟ್ ಪ್ರಸ್ತಾವನೆಗಳನ್ನು ಈ ಕೆಳಗಿನ ಮಾರ್ಗಗಳಲ್ಲಿ ಪರಿಗಣಿಸುವುದು

1. ಏಕವ್ಯಕ್ತಿ ಅಧಿಕಾರಿ/ನೌಕರ
2. ಗುಂಪು ಮತ್ತು
3. ಸಂಸ್ಥೆ

ಉನ್ನತಾಧಿಕಾರದ ಸಮಿತಿಯ ಶಿಫಾರಸ್ಸಿನನ್ವಯ, ಉನ್ನತೀಕರಣಕ್ಕೆ ಆಯ್ಕೆಯಾದ ಪೈಲಟ್ ಪ್ರಾಜೆಕ್ಟ್‌ಗಳಿಗೆ ಅಗತ್ಯವಿದ್ದಲ್ಲಿ, ಆರ್ಥಿಕ ಇಲಾಖೆಯು ಕೆಟಿಪಿಪಿ ಕಾಯ್ದೆಗೆ ವಿನಾಯಿತಿ ನೀಡುವುದು ಹಾಗೂ ಸಿಆಸುಇ (ಸೇವಾ ನಿಯಮಗಳು) ವಿಭಾಗವು ಕರ್ನಾಟಕ ನಾಗರೀಕ ಸೇವಾ (ನಡತೆ ನಿಯಮಗಳು) ನಿಯಮಗಳಿಗೆ ಅವಶ್ಯವಿದ್ದಲ್ಲಿ ವಿನಾಯಿತಿ ನೀಡುವುದು.

**ನಾಮನಿರ್ದೇಶನದ ಪ್ರಾಧಿಕಾರಿಗಳು :-**

ಯಾವುದೇ ಹಂತದಲ್ಲಿ ಕಳುಹಿಸಲ್ಪಡುವ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳ ಅಥವಾ ಇಲಾಖಾ ಮುಖ್ಯಸ್ಥರ ಶಿಫಾರಸ್ಸಿನೊಂದಿಗೆ ಸಿಆಸುಇ (ಅಸು) ವಿಭಾಗಕ್ಕೆ ಕಳುಹಿಸಬಹುದು.

**ನಾಮನಿರ್ದೇಶನಗಳ ನಿರ್ವಹಣೆ :-**

ಪ್ರಸ್ತಾವನೆಯ ಅನುಮೋದನೆಯ ಉದ್ದೇಶಕ್ಕಾಗಿ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕೆಳಕಂಡಂತೆ ಉನ್ನತಾಧಿಕಾರದ ಸಮಿತಿಯನ್ನು ಈ ಮೂಲಕ ರಚಿಸಲಾಗಿದೆ.

| | |
|---|---|
| ಅ) ಸರ್ಕಾರದ ಮುಖ್ಯ ಕಾರ್ಯದರ್ಶಿ | ಅಧ್ಯಕ್ಷರು |
| ಆ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | ಸದಸ್ಯರು |
| ಇ) ಸರ್ಕಾರದ ಅಭಿವೃದ್ಧಿ ಆಯುಕ್ತರು | ಸದಸ್ಯರು |
| ಈ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಸದಸ್ಯರು |
| ಉ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ | ಸದಸ್ಯರು |
| ಊ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | ಸದಸ್ಯರು |
| ಋ) ಸರ್ಕಾರದ ಪ್ರಧಾನ ಕಾರ್ಯದರ್ಶಿ (ಇ-ಆಡಳಿತ) ಸಿಆಸುಇ (ಆಡಳಿತ ಸುಧಾರಣೆ) | ಸದಸ್ಯರು |
| ಎ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) | ಸದಸ್ಯ-ಕಾರ್ಯದರ್ಶಿ |

ಪೈಲಟ್ ಪ್ರಾಜೆಕ್ಟ್‌ಗಳನ್ನು ಉನ್ನತೀಕರಣಕ್ಕೆ ಪರಿಗಣಿಸುವ ಮೊದಲು, ಅದರ ಯಶಸ್ಸಿನ ಮೌಲ್ಯಮಾಪನವನ್ನು ಪ್ರತ್ಯೇಕ ಏಜೆನ್ಸಿಯ ಮೂಲಕ, ಉನ್ನತಾಧಿಕಾರದ ಸಮಿತಿಯ ಶಿಫಾರಸ್ಸಿನನ್ವಯ, ನಡೆಸುವುದು, ಪೈಲಟ್ ಪ್ರಾಜೆಕ್ಟ್‌ಗಳ ಅನುಷ್ಠಾನಕ್ಕಾಗಿ ತಗಲುವ ವೆಚ್ಚವನ್ನು ಉನ್ನತಾಧಿಕಾರದ ಸಮಿತಿಯು ನಿರ್ಧರಿಸುವುದು ಹಾಗೂ ಸದರಿ ವೆಚ್ಚವನ್ನು ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ, ಚಾಲೆಂಜ್ ಫಂಡ್‌ಗಾಗಿ ಒದಗಿಸಿರುವ ಅನುದಾನದಿಂದ ಭರಿಸುವುದು. ಈ ಪೈಲಟ್ ಪ್ರಾಜೆಕ್ಟ್‌ಗಳ ಅನುಷ್ಠಾನವನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳು ನಿರ್ವಹಿಸುವುದು. ಇದಕ್ಕೆ ಸಂಬಂಧಿಸಿದ ವರದಿಗಳನ್ನು ಸಂಬಂಧಪಟ್ಟ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಅವರ ಶಿಫಾರಸ್ಸಿನೊಂದಿಗೆ ಸಿಆಸುಇ (ಅಸು), ಪ್ರಧಾನ ಕಾರ್ಯದರ್ಶಿಗಳಿಗೆ ಕಳುಹಿಸತಕ್ಕದ್ದು.

**ಪ್ರಶಸ್ತಿ :-**

ಈ ಯೋಜನೆಯಡಿಯ ಪ್ರಶಸ್ತಿಗಳನ್ನು ಅಧಿಕಾರಯುತ ಸಮಿತಿಯ ಶಿಫಾರಸ್ಸಿನನ್ವಯ ನೀಡಲಾಗುವುದು. ಈ ಪ್ರಶಸ್ತಿಗಳನ್ನು, ಪೈಲಟ್ ಪ್ರಾಜೆಕ್ಟ್‌ಗಳ ಉದ್ದೇಶ ಮತ್ತು ಸಾಧನೆಯನ್ನು ಯಶಸ್ವಿ ಅನುಷ್ಠಾನದ ನಂತರವೇ ನೀಡಲಾಗುವುದೇ ವಿನಃ ಅದಕ್ಕೆ ಮೊದಲೇ ಅಲ್ಲ, ರಾಜ್ಯ ಸರ್ಕಾರದ ಸೇವೆಯಲ್ಲಿರುವ ಯಾವುದೇ ಅಧಿಕಾರಿಯು ವೈಯಕ್ತಿಕವಾಗಿ/ಗುಂಪಾಗಲೀ ಅಥವಾ ಸಂಸ್ಥೆಯಾಗಲೀ ಈ ಪ್ರಶಸ್ತಿಗೆ ಅರ್ಹವಾಗಿರುತ್ತವೆ. ಗುಂಪು/ಸಂಸ್ಥೆಯಡಿ, ನಾಮನಿರ್ದೇಶಿತ ಸದಸ್ಯರು ಯೋಜನೆಯಲ್ಲಿ ಕ್ರಿಯಾತ್ಮಕವಾಗಿ ಹಾಗೂ ನೇರವಾಗಿ ಭಾಗಿಯಾಗಿರತಕ್ಕದ್ದು. ಈ ಯೋಜನೆಯಡಿ

ಗರಿಷ್ಠ 15 ಪ್ರಶಸ್ತಿಗಳನ್ನು ನೀಡಲಾಗುವುದು ಅಂದರೆ, ಪ್ರತಿ ವ್ಯಕ್ತಿ/ಗುಂಪು/ಸಂಸ್ಥೆ ವಿಭಾಗದಲ್ಲಿ ಐದೈದು ಪ್ರಶಸ್ತಿಗಳನ್ನು ಮಾತ್ರ ಪ್ರತ್ಯೇಕವಾಗಿ ಒಳಗೊಂಡಿರುತ್ತದೆ ಮತ್ತು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ ;

1) ಪ್ರಮಾಣ ಪತ್ರ

2) ನಗದು ಪ್ರಶಸ್ತಿ

ವೈಯಕ್ತಿಕ ವಿಭಾಗದಲ್ಲಿ, ಪ್ರಶಸ್ತಿ ಮೊತ್ತವು ರೂ. 1.00 ಲಕ್ಷಗಳಾಗಿರುತ್ತದೆ (ಒಂದು ಲಕ್ಷ ರೂಪಾಯಿಗಳು ಮಾತ್ರ) ಗುಂಪು ವಿಭಾಗದಲ್ಲಿ, ಪ್ರಶಸ್ತಿ ಮೊತ್ತವು, ಗುಂಪಿನ ಪ್ರತಿ ಸದಸ್ಯನಿಗೆ ಗರಿಷ್ಠ ರೂ. 1.00 ಲಕ್ಷಗಳ (ಒಂದು ಲಕ್ಷ ರೂಪಾಯಿಗಳು ಮಾತ್ರ) ಮಿತಿಗೊಳಪಟ್ಟು ರೂ. 5.00 ಲಕ್ಷಗಳಾಗಿರುತ್ತದೆ (ಐದು ಲಕ್ಷ ರೂಪಾಯಿಗಳು ಮಾತ್ರ) (ಗುಂಪಿನಲ್ಲಿ 5 ಜನರಿಗಿಂತ ಹೆಚ್ಚು ಸದಸ್ಯರಿದ್ದಲಿ, ಪ್ರಶಸ್ತಿ ಮೊತ್ತವು ಅವರುಗಳಲ್ಲಿ ಸಮನಾಗಿ ಹಂಚಿಕೆಯಾಗುತ್ತದೆ). ಸಂಸ್ಥೆ ವಿಭಾಗದಲ್ಲಿ ಪ್ರಶಸ್ತಿ ಮೊತ್ತವು ರೂ. 10.00 ಲಕ್ಷಗಳಾಗಿರುತ್ತವೆ (ಹತ್ತು ಲಕ್ಷ ರೂಪಾಯಿಗಳು ಮಾತ್ರ)

**ಅನುದಾನದ ಹಂಚಿಕೆ :**

ಈ ವೆಚ್ಚವನ್ನು ಲೆಕ್ಕಶೀರ್ಷಿಕೆ "2070–00–800–0–15–059 ಆಡಳಿತ ಸುಧಾರಣೆ–ಸವಾಲು ನಿಧಿ–ಇತರೆ ಖರ್ಚು" ಅಡಿಯಲ್ಲಿ ಭರಿಸತಕ್ಕದ್ದು.

**ಪ್ರಶಸ್ತಿ ಪ್ರಧಾನ :**

ಸದರಿ ಪ್ರಶಸ್ತಿಗಳನ್ನು ಇದೇ ಉದ್ದೇಶಕ್ಕಾಗಿ ವಿಶೇಷವಾಗಿ ಆಯೋಜಿಸಲಾಗುವ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಂದ ಪ್ರದಾನ ಮಾಡಲಾಗುವುದು.

**ಪ್ರಶಸ್ತಿಗಾಗಿ ಇತರೆ ಸಾಮಾನ್ಯ ಷರತ್ತುಗಳು :**

1. ಪ್ರಶಸ್ತಿ ಪಡೆದವರು ಮುಂದಿನ ಅವನ/ಅವಳ ಸೇವಾವಧಿಯಲ್ಲಿ (ವೈಯಕ್ತಿಕ ವಿಭಾಗದಲ್ಲಿ) ಅವರ ವಿರುದ್ಧ ಶಿಸ್ತು ಕ್ರಮ ಕೈಗೊಂಡಲ್ಲಿ ಸದರಿ ಪ್ರಶಸ್ತಿಯನ್ನು ಹಿಂಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ. ಸಂಸ್ಥೆ ವಿಭಾಗದಲ್ಲಿ ಪ್ರಶಸ್ತಿ ಘೋಷಣೆಯ ನಂತರ, ಸದರಿ ಸಂಸ್ಥೆಯು ಕೇಂದ್ರ/ರಾಜ್ಯ ಸರ್ಕಾರದಿಂದ ಬ್ಲಾಕ್ ಲಿಸ್ಟ್‌ಗೆ ಒಳಪಟ್ಟಲ್ಲಿ, ಪ್ರಶಸ್ತಿಯನ್ನು ಹಿಂಪಡೆಯಲಾಗುವುದು.
2. ಸರ್ಕಾರವು ಪ್ರಶಸ್ತಿಯನ್ನು ಹಿಂಪಡೆಯಲು ಅಥವಾ ರದ್ದುಗೊಳಿಸಲು ಅಥವಾ ಪ್ರಶಸ್ತಿಯ ದಾಖಲೆ ಪುಸ್ತಕದಿಂದ ವೈಯಕ್ತಿಕ/ಗುಂಪು/ಸಂಸ್ಥೆ ವಿಭಾಗದ ಪ್ರಶಸ್ತಿ ಪಡೆದವರ ಹೆಸರನ್ನು ತೆಗೆದುಹಾಕುವ ಅಧಿಕಾರವನ್ನು ಹೊಂದಿರುತ್ತದೆ.
3. ಈ ಯೋಜನೆಯಡಿ ಪ್ರಶಸ್ತಿ ಘೋಷಣೆಯಾದ ವ್ಯಕ್ತಿ/ಗುಂಪು/ಸಂಸ್ಥೆಯು ಅನುಬಂಧ–1 ರಲ್ಲಿಯ ಕರಾರು ಪತ್ರವನ್ನು ಮಾಡಿಕೊಳ್ಳತಕ್ಕದ್ದು. ಈ ಕರಾರು ಪತ್ರವು ಪ್ರಶಸ್ತಿ ಪಡೆದವರು ಪ್ರಶಸ್ತಿಯನ್ನು ಹಿಂದಿರುಗಿಸಲು ಅಥವಾ ವ್ಯಕ್ತಿ/ಗುಂಪು/ಸಂಸ್ಥೆಯ ಹೆಸರನ್ನು ಪ್ರಶಸ್ತಿ ದಾಖಲೆ ಪುಸ್ತಕದಿಂದ ತೆಗೆದು ಹಾಕುವ ಹಕ್ಕನ್ನು ಒಳಗೊಂಡಿರತಕ್ಕದ್ದು;
4. ಈ ಯೋಜನೆಯಡಿ ಪ್ರಶಸ್ತಿ ಪಡೆದ ವ್ಯಕ್ತಿ/ಗುಂಪು/ಸಂಸ್ಥೆಯು ಯಾವುದೇ ಸರ್ಕಾರ/ಮಂಡಳಿ/ಕಂಪನಿ/ಕಾರ್ಪೋರೇಷನ್/ಪ್ರಾಧಿಕಾರ/ಸ್ವಾಯತ್ತ ಸಂಸ್ಥೆಗಳು ಯಾವುದೇ ಯೋಜನೆಯಡಿ ಯಾವುದೇ ಬೇಡಿಕೆ, ವಿಶೇಷ ಪರಿಗಣನೆ, ಪರಿಹಾರ, ಪ್ರಾಮುಖ್ಯತೆ ಪಡೆಯಲು ಅರ್ಹತೆ ಹೊಂದಿರುವುದಿಲ್ಲ;
5. ಪ್ರಶಸ್ತಿಯನ್ನು ನೀಡಿದ/ಹಿಂಪಡೆದ ಬಗೆಗಿನ ವಿವರಗಳು ಅಥವಾ ಪುನರ್ ಪ್ರದಾನ ಮಾಡಿದ ವಿವರಗಳನ್ನು ಕರ್ನಾಟಕ ಗೆಜೆಟ್‌ನಲ್ಲಿ ಪ್ರಕಟಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 270 ವೆಚ್ಚ–12/10, ದಿನಾಂಕ 18–06–2010ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಅಬ್ದುಲ್ ರೆಹಮಾನ್**

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಸು–ಕರಬೇತಿ)

## ಅನುಬಂಧ–1

**ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 92, ಇಆಸು 2009, ಬೆಂಗಳೂರು, ದಿನಾಂಕ: 8ನೇ ಜುಲೈ, 2010**

**ಕರಾರು ಪತ್ರ**

ನಾನು, ಶ್ರೀ________________________ಚಾಲೆಂಜ್ ಫಂಡ್ ಯೋಜನೆಯಡಿ ಪ್ರಶಸ್ತಿ ಸ್ವೀಕರಿಸಿದ್ದು, ಈ ಮೂಲಕ ಘೋಷಿಸುವುದೇನೆಂದರೆ, ಈ ಪ್ರಶಸ್ತಿಗೆ ಸಂಬಂಧಪಟ್ಟ ನಿಬಂಧನೆ ಮತ್ತು ಷರತ್ತುಗಳನ್ನು ನಾನು/ನಾವು ಓದಿರುತ್ತೇನೆ/ವೆ ಮತ್ತು ಅರ್ಥೈಸಿಕೊಂಡಿರುತ್ತೇನೆ/ವೆ. ಈ ಪ್ರಶಸ್ತಿಯನ್ನು ವಾಪಸ್ಸು ಪಡೆದಲ್ಲಿ ಮತ್ತು ನನ್ನ ಹೆಸರನ್ನು ಪ್ರಶಸ್ತಿ ದಾಖಲೆ ಪುಸ್ತಕದಿಂದ ತೆಗೆದುಹಾಕಿದಲ್ಲಿ ಅಥವಾ ರದ್ದುಗೊಳಿಸಿದಲ್ಲಿ ನನ್ನಿಂದ/ನಮ್ಮ ಗುಂಪಿನಿಂದ/ನಮ್ಮ ಸಂಸ್ಥೆಯಿಂದ ಪಡೆದ/ಸ್ವೀಕರಿಸಿದ ಪ್ರಶಸ್ತಿಯನ್ನು ಸರ್ಕಾರಕ್ಕೆ ಹಿಂದಿರುಗಿಸುತ್ತೇನೆ/ವೆಂದು ಈ ಮೂಲಕ ಘೋಷಿಸುತ್ತೇನೆ/ವೆ.

ದಿನಾಂಕ : *ಪ್ರಶಸ್ತಿ ಸ್ವೀಕರಿಸಿದವರ ಸಹಿ*

ಸಾಕ್ಷಿಗಳು :

1)

2)

ಅನುಬಂಧ-2

**ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 92, ಇಆಸು 2009, ಬೆಂಗಳೂರು, ದಿನಾಂಕ: 8ನೇ ಜುಲೈ, 2010**

1. ಪ್ರಸ್ತಾವನೆಯ ರಚನೆ ಸಂಕ್ಷಿಪ್ತವಾಗಿರಬೇಕು
2. ಕಂಡಿಕೆ (2)ರಲ್ಲಿನ ಉದ್ದೇಶವನ್ನು ಪ್ರಸ್ತಾವನೆಯ ಮಾರ್ಗಸೂಚಿಗಳು ಹೊಂದಿರತಕ್ಕದ್ದು;
3. ಪ್ರಸ್ತಾವನೆಯು ಯಾವ ರೀತಿಯಲ್ಲಿ ಮಾರಾಟದ ಉದ್ದೇಶವಿಲ್ಲದ್ದು?
4. ಯೋಜನೆಗೆ ತಕ್ಕಂತೆ ಕಾರ್ಯನಿರ್ವಹಣೆಯಲ್ಲಿ ಸಾಧಿಸಿದ ಅಭಿವೃದ್ಧಿಯ ಅಂಶಗಳನ್ನು ಅಳೆಯುವ ಮಾನದಂಡಗಳೇನು?
5. ಪ್ರಸ್ತಾವನೆಯ ಉನ್ನತೀಕರಣದ ವಿಧಾನಗಳನ್ನು ತಿಳಿಸುವುದು;
6. ಕೆಟಿಪಿಪಿ ಆಕ್ಟ್ ಅಡಿ ವಿನಾಯಿತಿ ನೀಡುವ ಅಗತ್ಯವಿದೆಯೇ ಅಥವಾ ಇಲ್ಲವೇ? ಅಗತ್ಯವಿದ್ದಲ್ಲಿ ಕಾರಣಗಳನ್ನು ನೀಡುವುದು.
7. ಪ್ರಸ್ತಾವನೆಯನ್ನು ಮೂರನೆಯವರಿಂದ ಮೌಲ್ಯಮಾಪನ ಮಾಡಿಸಲು ಇರುವ ವ್ಯವಸ್ಥೆಗಳು;
8. ಪ್ರಸ್ತಾವನೆಯ ವೆಚ್ಚ;
9. ಅನುಷ್ಠಾನಕ್ಕಾಗಿ ಆಡಳಿತಾತ್ಮಕ ರಚನೆ (ಪೈಲಟ್ ಪ್ರಾಜೆಕ್ಟ್ ಆಗಿರುವುದರಿಂದ, ಸಿಬ್ಬಂದಿಯ ಸೃಜನೆಯನ್ನು ನಿರೀಕ್ಷಿಸಿರುವುದಿಲ್ಲ);
10. ಪ್ರಾಜೆಕ್ಟ್‌ಗಳ ಅನುಷ್ಠಾನವು ಸಂಬಂಧಿಸಿದ ಸರ್ಕಾರದ ಇಲಾಖೆಗಳು/ಸರ್ಕಾರದ ಏಜೆನ್ಸಿಗಳ ಮುಖಾಂತರ ನಡೆಯತಕ್ಕದ್ದು;

ಅಬ್ದುಲ್ ರೆಹಮಾನ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಅಸು-ತರಬೇತಿ)

## PERSONNEL & ADMINISTRATIVE REFORMS SECRETARIAT

**Sub :-** Establishing of 'Challenge Fund; scheme for Department and Organizations in the Government, which come out with innovative and cost effective projects-reg.

**Government Order No. DPAR 92 AAR 2009, Bangalore, dated : 8th July, 2010**

In the State Budget of 2009-10 an announcement was made establishing a "Challenge Fund" of Rs. 10.00 crores (Rupees Ten crores only) for Departments and Organizations in the Government, which come out with innovative and cost effective projects. A small component of the Challenge Fund would be provided for the purpose of recognition of award to the individual, Team or the Organization, who successfully float pilot projects, found to be useful for scaling up. The Cabinet has approved the said scheme on 28-01-2010. Accordingly, the following guidelines are formulated;

**Objective of the Scheme :**

The objective of the Challenge Fund is to support innovative ideas of technology through implementation of scalable pilot projects, for achieving any of the following goals, from individual Government Officers/Officials/Team of Government Officers and Officials/and from Government Organization.

a) Improving quality of existing services
b) Reduction in cost of providing services
c) Introducing a new public service for convenience of the people
d) Improving Administration/Governance
e) Improving collection of revenues or providing of new source of revenue of Government.
f) Invite innovative ideas or technology through implementation of scalable pilot projects.

**Scope of the Scheme :**

The proposal should involve an innovative idea or technology. The Challenge Fund would only meet the cost of implementing the idea or the technology on a pilot scale for demonstration. The proposal should clearly state the performance parameters that would be improved and the mechnanism for monitoring those parameters. While the proposal can be initiated at any level, only such proposals would be considered which are amenable for sustainability and which can be replicated on a larger scale through a competitive procurement process. The proposal should establish feasibility of scaling up of the project and vendor neutral technology. Vendor driven proposals should be discouraged.

The structure of the proposal shall be as follows ;

1. Concise structure of proposal in brief
2. To which of the objective specified in para (2) of the guideline does the proposal relate.
3. In what manner is the proposal vendor neutral
4. List out the performance parameters indicating the baseline of the scheme and how it will be measured.
5. State the method of scalability of the proposal

6. Is exemption under KTPP Act required or not If required, reasons to be provided.
7. Arrangement proposed for third party evaluation of the proposal
8. Cost of the proposal
9. Administrative structure for implementation (being a pilot project, creation of staff would not be expected).
10. Implementation of the projects shall be through concerned Government Departments/Government agencies only. (The details in this behalf are enclosed in Annexure-2 for information)

The pilot project proposal will be considered by the Empowered Committee under the following categories.

1. Individual Officer/Official
2. Team and
3. Organization

On the recommendations of the Empowered Committee, Finance Department shall seek approval for exemption from KTPP Act, if required, and DPAR (Service Rules) would provide exemption from Karnataka Civil Service (Conduct Rules) if required, to the pilot projects.

**Nominating authorities :**

The proposal emanating at any level may be sent to department of personnel and Administrative Reforms (Administrative Reforms) with the recommendations of the Principal Secretary/Secretary to Government of the concerned department and Head of Departments.

**Processing of nominations :**

As an approval mechanism, an Empowered Committee is hereby constituted under the Chairmanship of the Chief Secretary to Government, as below:

| | | | |
|---|---|---|---|
| 1. | Chief Secretary to Government | ... | Chairman |
| 2. | Additional Chief Secretary to Government | ... | Member |
| 3. | Development Commissioner to Government | ... | Member |
| 4. | Principal Secretary to Government, Finance Department | ... | Member |
| 5. | Principal Secretary to Government, Planning Department | ... | Member |
| 6. | Principal Secretary to Government, IT, BT, Science & Technology Department | ... | Member |
| 7. | Principal Secretary to Government, (e-Governance) | ... | Member |
| 8. | Principal Secretary to Government, DPAR-AR | ... | Member Secretary |

The evaluation of the success of the pilot project could be done by an independent agency, as recommended by the Empowered Committee, before any scaling up is considered. The expenditure required for the implementation of the pilot project shall be approved by the Empowered Committee and the same will be met out of the funds allocated under Challenge Fund scheme. The implementation of the pilot projects shall be monitored by the concerned Administrative Department and reports in this behalf may be forwarded to Principal Secretary to Government, DPAR-AR along with the recommendations of the Principal Secretary/Secretary of the concerned department.

**The Award :**

The awards under the scheme will be conferred on the recommendations of the Empowered Committee. These awards will be conferred only after the successful Implementation of the achievements and objectives of the pilot project and not prior to that. All serving officers of the State Government, either individually or as a team, or as an organization are eligible for the awards. Under team/organization, the nominated members should have been actively and directly involved in the initiative. A maximum of 15 awards would be given under the scheme, that is five awards each for individual, team and organization categories respectively, The award would carry with it;

i) A certificate
ii) A cash award

In the individual category, the award amount would be Rs. 1 Lakh (Rupee one Lakh only). In case of a team, the total award would be Rs. 5 Lakhs (Rupees five Lakhs only) subject to a maximum of Rs. 1 Lakh (Rupees one Lakh only) per member (if the number of members in the team exceeds five, then the award amount should be equally distributed among all the members). The award amount for an organization would be Rs. 10 Lakhs (Rupees Ten Lakhs only).

**Allocation of funds :**

The expenditure on this account shall be debited to the Head of Account 2070-00-800-0-15-059 "Administrative Reforms-Challenge Fund-other expenses"

**Presentation of awards :**

The awards would be presented by Chief Secretary to Government of Karnataka in the function convened specially for this purpose.

**Other general conditions for awards :**

1. The award is subject to withdrawal, if any disciplinary action is taken against the award winner during the remainder of his/her service in the government (in respect of individual). The award will also be withdrawn in case of organizations, if they are black listed by the State/Central Government subsequently after the announcement of the award.
2. Government reserves the right to withdraw or cancel the award and also remove the name of the award winner, individuals/teams/organizations from the Register of Awards.
3. All the individuals/teams/organizations to whom awards have been announced under this scheme shall execute an agreement as in Annexure-1 before receiving the award. The agreement inter-alia provides for return of the award bestowed in case the award winner's name/team/organization's name is subsequently removed from the Register of awards.
4. All the individual/team/organization's who have been awarded under this scheme are not eligible for any claim, special consideration, relief, privilege or any facilities under nay scheme of the Government/Boards/Company/Corporation/Authority/ Statutory bodies.
5. The details of awards withdrawn or re-bestowed shall be published in the Karnataka Gazette.

This order issues with the concurrence of Finance Department vide note No. FD/270/Exp-12/10, dated 18-06-2010.

By Order and in the name of the Governor of Karnataka
**Abdul Rahaman**
Under Secretary to Government
DPAR-AR (Training)

ANNEXURE-1 .

**Government Order No. DPAR 92 AAR 2009, Bangalore, dated : 8th July, 2010**

AGREEMENT

Sri.......................................................recipient of the Award under the Challenge Fund Scheme, hereby declare that I/We have read and understood the terms and conditions relating to the Award. I hereby, undertake that in case the Award is withdrawn and my name is removed or cancelled from the Register of Award, the award so received/accepted by me/our team/our organization will be returned to Government.

Dated :

*Signatures of the Recipient of the Awards*

Witness :

1)
2)

ANNEXURE-2

**Government Order No. DPAR 92 AAR 2009, Bangalore, dated : 8th July, 2010**

1. Concise structure of proposal in brief
2. To which of the objective specified in para (2) of the guidelines does the proposal relate.
3. In what manner is the proposal vendor neutral
4. List out the performance parameters indicating the baseline of the scheme, and how it will be measured.
5. State the method of scalability of the proposal
6. Is exemption under KTPP Act required or not. If required, reasons to be provided
7. Arrangements proposed for third party evaluation of the proposal
8. Cost of the proposal
9. Administrative structure for implementation (being a pilot project, creation of staff would not be expected).
10. Implementation of the projects shall be through concerned Government Departments/Government agencies only.

**Abdul Rahaman**
Under Secretary to Government
DPAR-AR (Training)

P.R. 1891